ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

SE (IT & MIS)

10

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಬಿ6/ಬಿ5/ಎ1-6382/72-73/III

ದಿನಾಂಕ : 20 JAN 2020

EE (IT)
EE (IT)-1 ✓
EE (IT) (NW&DC)
EE (MIS)
DCA (IT)

## ಅಧಿಕೃತ ಜ್ಞಾಪನ

ವಿಷಯ: ನಿಗಮದಲ್ಲಿ ಹಿರಿಯ ಹಾಗೂ ಕಿರಿಯ ವೈದ್ಯಕೀಯ ಸಲಹೆಗಾರರ ಸೇವೆಯನ್ನು ಪಡೆಯುವ ಬಗ್ಗೆ.

ಉಲ್ಲೇಖ: ನಿಗಮ ಕಾರ್ಯಾಲಯದ ಅಧಿಕೃತ ಜ್ಞಾಪನ ದಿನಾಂಕ: 22.12.2018

*****

SEE (IT & MIS) KPTCL

ಕವಿಪ್ರನಿನಿ. ಕಾವೇರಿ ಭವನ. ಬೆಂಗಳೂರು ಇಲ್ಲಿ ಈ ಕೆಳಕಂಡ ಹಿರಿಯ ಹಾಗೂ ಕಿರಿಯ ವೈದ್ಯಕೀಯ ಸಲಹೆಗಾರರ ಸೇವೆಯನ್ನು ಅರೆಕಾಲಿಕವಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ದಿನಾಂಕ: 01.01.2020 ರಿಂದ 31.12.2020 ರ ಅವಧಿಯವರೆಗೆ ಪಡೆಯಲು ಅನುಮೋದನೆ ನೀಡಲಾಗಿದೆ.

<u>ಹಿರಿಯ ವೈದ್ಯಕೀಯ ಸಲಹೆಗಾರರು</u>

| | |
|---|---|
| 1 | ಡಾ॥. ಹೆಚ್.ಎಂ.ವಿ.ಶರ್ಮಾ, ಎಂ.ಬಿ.ಬಿ.ಎಸ್. ಪಿ.ಜಿ. ಇ.ಎನ್.ಟಿ. ಜಿಲ್ಲಾ ಸರ್ಜನ್ (ನಿವೃತ್ತ)<br>(ಸೋಮವಾರ ದಿಂದ ಬುಧವಾರದವರೆಗೆ ಮಧ್ಯಾಹ್ನ 2.30 ರಿಂದ 5.30 ರವರೆಗೆ) |
| 2 | ಡಾ॥.ಮಂಜುಳ ಸಂಗಮೇಶ್ ಗೋಧಿ, ಎಂ.ಬಿ.ಬಿ.ಎಸ್, (ಡಿ.ಜಿ.ಓ) ಪಿಜಿಡಿ ಸರ್ಜನ್(ನಿವೃತ್ತ)<br>(ಗುರುವಾರ ದಿಂದ ಶನಿವಾರದವರೆಗೆ ಮಧ್ಯಾಹ್ನ 2.30 ರಿಂದ 5.30 ರವರೆಗೆ) |

<u>ಕಿರಿಯ ವೈದ್ಯಕೀಯ ಸಲಹೆಗಾರರು</u>

| | |
|---|---|
| 1 | ಡಾ॥ ಟಿ.ವಿ.ಸುಧಾ, ಎಂ.ಬಿ.ಬಿ.ಎಸ್.<br>(ಸೋಮವಾರ ದಿಂದ ಬುಧವಾರದವರೆಗೆ ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.30 ರವರೆಗೆ) |
| 2 | ಡಾ॥ ಶೈಲಜಾ, ಎಂ.ಬಿ.ಬಿ.ಎಸ್,<br>(ಗುರುವಾರದಿಂದ ಶನಿವಾರದವರೆಗೆ ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.30 ರವರೆಗೆ) |

ಸದರಿ ಹಿರಿಯ ವೈದ್ಯಕೀಯ ಸಲಹೆಗಾರರಿಗೆ ಗೌರವಧನ ರೂ. 24,000/- ಮತ್ತು ವಾಹನ ಭತ್ಯೆ ರೂ. 6,000/- ಒಟ್ಟು ರೂ. 30,000/- ಹಾಗೂ ಕಿರಿಯ ವೈದ್ಯಕೀಯ ಸಲಹೆಗಾರರಿಗೆ ಗೌರವಧನ ರೂ. 20,000/- ಗಳನ್ನು ನಿಗಧಿಪಡಿಸಿ ಇದರೊಂದಿಗೆ ಲಗತ್ತಿಸಿರುವ ನಿಬಂಧನೆಗೊಳಪಟ್ಟಂತೆ ಕಾರ್ಯನಿರ್ವಹಿಸುವುದಾಗಿ ರೂ. 200/- ಮೌಲ್ಯದ ಸ್ಟಾಂಪ್ ಪೇಪರ್‌ನಲ್ಲಿ ಮುಚ್ಚಳಿಕೆಯನ್ನು ಸೇವೆಗೆ ಹಾಜರಾಗುವ ಮುನ್ನ ಸಲ್ಲಿಸುವುದು.

20/1/2020

ನಿರ್ದೇಶಕರು (ಆ ಮತ್ತು ಮಾ.ಸಂ.)
ಕವಿಪ್ರನಿನಿ

<u>ಪ್ರತಿ:</u>

1. ಎಲ್ಲಾ ಆರ್ಥಿಕ ಸಲಹೆಗಾರರು ,ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಆರ್ಥಿಕ)/ನಿರ್ದೇಶಕರು (ಆ ಮತ್ತು ಮಾ.ಸಂ)/ ವ್ಯವವಸ್ಥಾಪಕ ನಿರ್ದೇಶಕರು (ಪಿ.ಸಿ.ಕೆ.ಎಲ್.) ರವರುಗಳ ಆಪ್ತ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು
3. ವ್ಯವಸ್ಥಾಪಕರು (ಆಂ.ನಿ), ನಿಗಮ ಕಾರ್ಯಾಲಯ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು.
4. ಸಂಬಂಧಪಟ್ಟ ಹಿರಿಯ ಮತ್ತು ಕಿರಿಯ ವೈದ್ಯಾಧಿಕಾರಿಗಳ ಮಾಹಿತಿಗಾಗಿ ಹಾಗೂ ಲಗತ್ತಿಸಿರುವ ನಿಬಂಧನೆಗೊಳಪಟ್ಟಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.

<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.com-->eprasarana**ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>

5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ
7. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಲೆಕ್ಕಾಧಿಕಾರಿ (ಆಂ.ಪ), ಕವಿಪ್ರನಿನಿ
8. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು

## ವೈದ್ಯಾಧಿಕಾರಿ ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಗಳು

1. ನಿಗಮದ ನೌಕರರಿಗೆ ಹಿರಿಯ ವೈದ್ಯಕೀಯ ಸಲಹೆಗಾಗಿ ಅವರ ಕ್ಲೀನಿಕ್/ಮನೆಯಲ್ಲಾಗಲಿ ಭೇಟಿ ಮಾಡಲು ಅನುಕೂಲಕರವಾದ ದಿನಗಳು/ವೇಳೆ ಮತ್ತು ಸ್ಥಳ/ದೂರವಾಣಿ ಸಂಖ್ಯೆ ಇವುಗಳನ್ನು ಮುಂಚಿತವಾಗಿಯೇ ನಿಗಮಕ್ಕೆ ತಿಳಿಸುವುದು.
2. ಪ್ರತೀ ಹಿರಿಯ ವೈದ್ಯಕೀಯ ಸಲಹೆಗಾರರು ವಾರದಲ್ಲಿ 3 ದಿನಗಳು ಮಧ್ಯಾಹ್ನ 2:30 ರಿಂದ 5:30 ರವರೆಗೆ ನಿಗಮ ಕಚೇರಿಗೆ ಭೇಟಿ ಮಾಡಿ ನಿಗಮದಿಂದ ನೀಡಲ್ಪಟ್ಟ ವೈದ್ಯಕೀಯ ಹುಂಡಿಗಳ ಪರಿಶೀಲನೆ (Scrutiny) ಮತ್ತು ಮೇಲುರುಜು ಮಾಡಬೇಕಾಗಿರುತ್ತದೆ. ಆಡಳಿತ ಕಛೇರಿಯಲ್ಲಿ ಹಿರಿಯ ವೈದ್ಯಕೀಯ ಸಲಹೆಗಾರರು ರೋಗಿಗಳನ್ನು ಪರೀಕ್ಷೆ ಮಾಡಬೇಕು (ಕೆಲವು ಪ್ರಕರಣದಲ್ಲಿ ವೈದ್ಯಕೀಯ ದೃಢೀಕರಣಗಳ ಪತ್ರ) ನೌಕರರಿಗೆ ಅವಶ್ಯಕವಾದ ವೈದ್ಯಕೀಯ ದೃಢೀಕರಣ ಪತ್ರಗಳನ್ನು ನೀಡುವುದು.
3. ಕಿರಿಯ ವೈದ್ಯಕೀಯ ಸಲಹೆಗಾರರು ವಾರದಲ್ಲಿ 3 ದಿನಗಳು ಬೆಳಗ್ಗೆ 10.00 ರಿಂದ 1.30 ರವರೆಗೆ ನಿಗಮ ಕಛೇರಿಗೆ ಭೇಟಿ ಮಾಡಿ ಕವಿಪ್ರನಿನಿಯ ಅಧಿಕಾರಿ/ನೌಕರರಿಗೆ ಸಂಬಂಧಿಸಿದಂತೆ ಅಗತ್ಯತೆಗನುಗುಣವಾಗಿ ಹೊರ ರೋಗಿಯಾಗಿ ಬರುವವರಿಗೆ ತಪಾಸಣೆ ಮಾಡಿ ಚಿಕಿತ್ಸೆ ನೀಡುವುದು.
4. ನಿಗಮದ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತರು ಅನಾರೋಗ್ಯದ ನಿಮಿತ್ತ ನಿಗಮದಿಂದ ಅಂಗೀಕೃತಗೊಂಡಿರುವ ಆಸ್ಪತ್ರೆಗಳಲ್ಲಿ ದಾಖಲಾದ 24 ಗಂಟೆಗಳೊಳಗಾಗಿ ರೆಫರಲ್ ಪತ್ರವನ್ನು ನೀಡಲು ಸೂಕ್ತ ಸಲಹೆಯನ್ನು ನೀಡುವುದು.
5. ನಿಗಮದಲ್ಲಿನ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತರು ಅನಾರೋಗ್ಯದ ನಿಮಿತ್ತ ನಿಗಮದಿಂದ ಅಂಗೀಕೃತಗೊಂಡಿರುವ ಆಸ್ಪತ್ರೆಗಳಲ್ಲಿ ದಾಖಲಾದಲ್ಲಿ ಆ ಆಸ್ಪತ್ರೆಗಳಿಗೆ ಭೇಟಿ ನೀಡುವುದು.
6. ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್, ಕಿಡ್ನಿ, ಮೆದುಳಿನ ಕಾಯಿಲೆ ಮತ್ತು ಹೃದಯ ಸಂಬಂದಿ ಕಾಯಿಲೆಗಳ ಹುಂಡಿಗೆ ಸಂಬಂಧಿಸಿದಂತೆ ವಿಷಯ ನಿರ್ವಾಹಕರು ದರಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ಕೋರಿದಾಗ, ಸ್ಪಷ್ಟನೆ ನೀಡುವುದು.
7. ನಿಗಮದಿಂದ ಸೂಚಿಸಲ್ಪಟ್ಟ ಪ್ರಕರಣಗಳಿಗೆ ಮಾತ್ರ ಸಂಬಂಧಪಟ್ಟಂತೆ ಕ್ರಾನಿಕ್ ಕಾಯಿಲೆಗಳಿಂದ ನರಳುತ್ತಿರುವ ರೋಗಿಗಳನ್ನು ಅವರ ವಾಸ ಸ್ಥಳದಲ್ಲಿ ಪರೀಕ್ಷೆ ಮಾಡಿ, ದೃಢೀಕರಿಸಿ ಸರಿಯಾದ ಚಿಕಿತ್ಸೆಯನ್ನು ನೀಡಬೇಕು.
8. ಒಂದು ವೇಳೆ ತುರ್ತು ಸಂದರ್ಭದಲ್ಲಿ ಅಧಿಕಾರಿ/ನೌಕರರು ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಿದ್ದಲ್ಲಿ ನಿಗಮದ ವೈದ್ಯಾಧಿಕಾರಿಯವರು ಸಂಬಂಧಿಸಿದ ಆಸ್ಪತ್ರೆಯವರೊಡನೆ ಸಂಪರ್ಕಿಸಿ ಅಗತ್ಯ ಸಲಹೆ/ಮಾರ್ಗದರ್ಶನ ನೀಡುವುದು.
9. ನಿಗಮದಲ್ಲಿ ಅನುಕಂಪದ/ನೇರ ನೇಮಕಾತಿ ಆಧಾರದ ಮೇಲೆ ನೇಮಕಗೊಳ್ಳುವ ನೌಕರರಿಗೆ ವೈದ್ಯಕೀಯ ತಪಾಸಣೆ ಮಾಡಿ ದೃಢೀಕರಣ ಪತ್ರವನ್ನು ನೀಡುವುದು.
10. ಹಾಗೆಯೇ ನಿಗಮದ ಸೇವೆಯಿಂದ ನಿವೃತ್ತಿ/ಸ್ವಯಂ ನಿವೃತ್ತಿ ಹೊಂದುವ ನೌಕರರಿಗೆ ವೈದ್ಯಕೀಯ ದೃಢೀಕರಣ ಪತ್ರವನ್ನು ನೀಡುವುದು.
11. ನಿಗಮದ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತರು ನಿಗಮದಿಂದ ದೃಢೀಕೃತವಲ್ಲದ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ದಾಖಲುಗೊಂಡು, ಆನಂತರ ಸದರಿ ವೈದ್ಯಕೀಯ ಬಿಲ್ಲುಗಳನ್ನು ಮರುಪಾವತಿಗೆ ಸಲ್ಲಿಸಿದ ಸಂದರ್ಭದಲ್ಲಿ ನಿಗಮದ ವೈದ್ಯಕೀಯ ಮರುಪಾವತಿ ನಿಯಮಗಳನ್ವಯ ಪರಿಶೀಲಿಸಿ ಅಭಿಪ್ರಾಯ ನೀಡುವುದು.
12. ನಿಗಮದಿಂದ ದೃಢೀಕೃತಗೊಂಡಿರುವ ಆಸ್ಪತ್ರೆಗಳಿಂದ ಸ್ವೀಕೃತಗೊಳ್ಳುವ ವೈದ್ಯಕೀಯ ಬಿಲ್ಲುಗಳನ್ನು ಸಹ ಪರಿಶೀಲಿಸಿ ಪಾವತಿಗಾಗಿ ಸೂಕ್ತ ಕ್ರಮವಹಿಸುವುದು.
13. ನಿಗಮದ ಅಧಿಕಾರಿ/ನೌಕರರುಗಳನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸುವ ಕುರಿತು ನುರಿತ ವೈದ್ಯಾಧಿಕಾರಿಗಳ ತಂಡದೊಂದಿಗೆ ಮುಂಜಾಗೃತ ಆರೋಗ್ಯ ಶಿಬಿರಗಳನ್ನು ಆಗಿಂದಾಗ್ಗೆ ಅವಶ್ಯಕತೆಗನುಗುಣವಾಗಿ ಏರ್ಪಡಿಸುವುದು.

14. ನಿಗಮದ ಅಧಿಕಾರಿ/ನೌಕರರು ಕರ್ತವ್ಯದ ವೇಳೆಯಲ್ಲಿ ಯಾವುದೇ ತರಹದ ಸಣ್ಣ-ಪುಟ್ಟ ಗಾಯ ಅಥವಾ ಕಾಯಿಲೆಗೆ ಒಳಗಾದಲ್ಲಿ ನಿಗಮದ ವೈದ್ಯಾಧಿಕಾರಿಗಳನ್ನು ಸಂಪರ್ಕಿಸುವ ಸಾಧ್ಯತೆ ಇರುವುದರಿಂದ ವೈದ್ಯಕೀಯ ಕೊಠಡಿಯಲ್ಲಿ ಪ್ರತಿದಿನ ಮಧ್ಯಾಹ್ನ 2.30 ರಿಂದ ಸಂಜೆ 5.30 ರವರೆಗೆ ಕರ್ತವ್ಯ ನಿರ್ವಹಿಸುವುದು.
15. ಹೊಸದಾಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಆಸ್ಪತ್ರೆಗೆ ಖುದ್ದಾಗಿ ಭೇಟಿ ನೀಡಿ ಆಡಳಿತ ವರ್ಗಕ್ಕೆ ಸೂಕ್ತ ಶಿಫಾರಸ್ಸು ಮಾಡುವುದು.
16. ನಿಗಮದ ಅಧಿಕಾರಿ/ನೌಕರರು ತುರ್ತು ಸಂದರ್ಭದಲ್ಲಿ ಕರೆ ಮಾಡಿದಾಗ ಅವರಿಗೆ ವೈದ್ಯಕೀಯ ವಿಷಯಗಳ ಕುರಿತು ಸೂಕ್ತ ಮಾರ್ಗದರ್ಶನ ನೀಡುವುದು.
17. ದಿನಂಪತ್ರಿ ಕರ್ತವ್ಯಕ್ಕೆ ಹಾಜರಾಗುವಾಗ ಮತ್ತು ತೆರಳುವಾಗ ಕಡ್ಡಾಯವಾಗಿ ಪಂಚಿಂಗ್ ಮಾಡಿ ತೆರಳುವುದು. ಮಾಸಿಕ ಗೌರವ ಧನವನ್ನು ಪಂಚಿಂಗ್ ಹಾಜರಾತಿಯ ಆಧಾರದ ಮೇಲೆ ಪಾವತಿಸಲಾಗುವುದು.
18. ಹಿರಿಯ/ಕಿರಿಯ ವೈದ್ಯಕೀಯ ಸಲಹೆಗಾರರು ವೈಯಕ್ತಿಕ ಕಾರಣಗಳಿಗೆ ಗೈರು ಹಾಜರಾದಲ್ಲಿ ಬದಲಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.
19. ನಿಗಮವು ಹಿರಿಯ/ಕಿರಿಯ ವೈದ್ಯಕೀಯ ಸಲಹೆಗಾರರನ್ನು ಯಾವುದೇ ಸಮಯದಲ್ಲಾದರೂ 15 ದಿನಗಳ ನೋಟೀಸನ್ನು ನೀಡಿ ತೆಗೆದುಹಾಕುವ ಹಕ್ಕು ಹೊಂದಿರುತ್ತದೆ.
20. ಯಾವುದೇ ನಿಯಮಗಳ ಸೇರ್ಪಡೆಯಾಗದಿದ್ದಲ್ಲಿ ಅಗತ್ಯ ಚರ್ಚೆಯ ನಂತರ ಇತರೆ ನಿಯಮ ಮತ್ತು ಷರತ್ತುಗಳನ್ನು ಇತ್ಯರ್ಥಪಡಿಸಲಾಗುವುದು.
21. ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರು (ಆ ಮತ್ತು ಮಾ.ಸಂ) ಮೇಲಾಧಿಕಾರಿಗಳು ಸೂಚಿಸುವ ಇನ್ನಿತರ ಕೆಲಸಗಳನ್ನು ನಿರ್ವಹಿಸುವುದು.

30/1/2020

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ